**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು**
**ಸಂಚಾರ (ವಾಣಿಜ್ಯ) ಇಲಾಖೆ**

ಸಂ.ಕರಾಸಾ/ಕೇಕ/ಸಂ/ವಾ-1/2103/17-18 ದಿನಾಂಕ 30-06-2007

**ಸುತ್ತೋಲೆ ಸಂಖ್ಯೆ:1390/2017**
**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

ವಿಷಯ : ವಾಣಿಜ್ಯ ಮಳಿಗೆ, ಜಾಹೀರಾತು, ಮಾರ್ಗಬದಿಯ ಫಲಹಾರ ಮಂದಿರ, ಪಾರ್ಸೆಲ್ & ಕೋರಿಯರ್ ಮತ್ತು ಸ್ವಚ್ಛತಾ ಗುತ್ತಿಗೆಯಿಂದ ಗಳಿಸುವ ಆದಾಯದ ಮೇಲೆ ನಿಗಮದ ಸೇವೆ ಒದಗಿಸುವಾಗ ದಿನಾಂಕ 01-07-2017 ರಿಂದ ಏಕರೂಪ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ ಶುಲ್ಕ) ವಿಧಿಸುವ ಬಗ್ಗೆ.

ಉಲ್ಲೇಖ: ಭಾರತ ಸರ್ಕಾರದ ಏಕರೂಪ ಸರಕು & ಸೇವಾ ತೆರಿಗೆ ಕಾಯ್ದೆಯ ನಿರ್ದೇಶನಗಳು.

****

ಕೇಂದ್ರ ಸರ್ಕಾರವು ದಿನಾಂಕ 01-07-2017 ರಿಂದ ಜಾರಿಗೆ ಬರುವಂತೆ ಏಕರೂಪ ಸರಕು & ಸೇವಾ ತೆರಿಗೆ (GST) ಪದ್ದತಿಯನ್ನು ಜಾರಿಗೆ ತರುತ್ತಿದೆ. ಈ ತೆರಿಗೆ ಪದ್ಧತಿಯನ್ನು ಕ.ರಾ.ರ.ಸಾ.ನಿಗಮದ ವಾಣಿಜ್ಯ ಮಳಿಗೆ, ಜಾಹೀರಾತು, ಮಾರ್ಗಬದಿಯ ಫಲಹಾರ ಮಂದಿರ, ಪಾರ್ಸೆಲ್ & ಕೋರಿಯರ್ ಮತ್ತು ಸ್ವಚ್ಛತಾ ಗುತ್ತಿಗೆಯಿಂದ ಗಳಿಸುವ ಆದಾಯಗಳಿಗೆ ಅಳವಡಿಸಿಕೊಳ್ಳಬೇಕಿರುತ್ತದೆ. ನೂತನ GST ದರಗಳನ್ವಯ ನಿಗಮದ ಕೆಳಕಂಡ ಸೇವೆಗಳಿಗೆ ಈ ಕೆಳಕಂಡಂತೆ ದರಗಳನ್ನು ಪರಿಷ್ಕರಿಸಲಾಗಿದೆ.

| ಕ್ರ.ಸಂ. | ಆದಾಯ ಮೂಲ | ಪ್ರಸ್ತುತ ಇರುವ ಸೇವಾ ತೆರಿಗೆ | ದಿನಾಂಕ 01.07.2017 ರಿಂದ ವಿಧಿಸಬೇಕಿರುವ GST ದರ |
|---|---|---|---|
| 1 | ವಾಣಿಜ್ಯ ಮಳಿಗೆಗಳಿಂದ ಪಡೆಯುವ ಪರವಾನಗಿ ಶುಲ್ಕ (Commercial Establishments) | ಶೇ.15 | ಶೇ.18 |
| 2 | ಜಾಹೀರಾತು ಪ್ರದರ್ಶಿಸುವುದರಿಂದ ಗಳಿಸುವ ಆದಾಯ (Advertisement on Buses, Hoardings, Neon sign, Glow sign etc) | ಶೇ.15 | ಶೇ.18 |
| 3 | ಮಾರ್ಗಬದಿಯ ಫಲಹಾರ ಮಂದಿರಗಳಿಂದ ಪಡೆಯುವ ಆದಾಯ | ಶೇ.15 | ಶೇ.18 |
| 4 | ಪಾರ್ಸೆಲ್ & ಕೋರಿಯರ್ ಆದಾಯ | ಶೇ.15 | ಶೇ.18 |
| 5 | ಸ್ವಚ್ಛತಾ ಗುತ್ತಿಗೆ (ಆದಾಯ ಪಡೆಯುವುದು ಮತ್ತು ಪಾವತಿಸುವುದು) | ಶೇ.15 | ಶೇ.18 |

ನಿಗಮವು ಪಡೆದುಕೊಂಡಿರುವ GST Provisional ID: 29AAACV6497R2Z4 ಆಗಿರುತ್ತದೆ.

.....2

ಮೇಲ್ಕಂಡ ಜಿಎಸ್‌ಟಿ ದರಗಳನ್ನು **ದಿನಾಂಕ 01-07-2017** ರಿಂದ ಜಾರಿಗೆ ಬರುವಂತೆ ವಿಧಿಸಬೇಕಿರುತ್ತದೆ. ಈ ದರಗಳನ್ನು ವಿಧಿಸುವಲ್ಲಿ ಕೆಳಕಂಡ ನಿಯಮಗಳನ್ನು ಅನುಸರಿಸಲು ಸೂಚಿಸಲಾಗಿದೆ.

1. ಜಿಎಸ್‌ಟಿ ದರಗಳನ್ನು ಒಟ್ಟು ಮೊತ್ತದ ಮೇಲೆ ವಿಧಿಸುವುದು.
2. ಮೇಲ್ಕಂಡ ಸೇವೆಗಳನ್ನು ಪಡೆಯಲಿಚ್ಚಿಸುವ ಗ್ರಾಹಕರಿಗೆ ಸೇವೆಯ ಒಟ್ಟು ಮೊತ್ತ, ಜಿಎಸ್‌ಟಿ ದರಗಳನ್ನು ಒಳಗೊಂಡ ಇನ್‌ವಾಯ್ಸ್ ನೀಡುವುದು.
3. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಗ್ರಾಹಕರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಗ್ರಾಹಕರು ತಡಮಾಡಿದಲ್ಲಿ ಜಿಎಸ್‌ಟಿ ದರದ ಮೇಲೂ ನಿಯಮಾವಳಿಗಳನ್ವಯ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಲೆಕ್ಕಾಚಾರ ಮಾಡಿ ಪಾವತಿಸಿಕೊಳ್ಳಬೇಕಿರುತ್ತದೆ.
4. ಪರವಾನಗಿದಾರರಿಂದ GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಪಡೆದುಕೊಳ್ಳುವುದು.
5. GST ಯನ್ನು ಸರ್ಕಾರಕ್ಕೆ ಪಾವತಿಸುವ ಸಂಬಂಧ ಲೆಕ್ಕಪತ್ರ ಶಾಖೆಯಿಂದ ನೀಡಲಾಗುವ ಮಾರ್ಗಸೂಚಿಗಳನ್ನು ಅನುಸರಿಸುವುದು.

ಮೇಲ್ಕಂಡ ನಿಯಮಗಳನ್ನು ಹೊರತುಪಡಿಸಿ ಇತರೆ ನಿಯಮಾವಳಿಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ನೂತನ **GST** ದರಗಳನ್ನು ಯಾವುದೇ ವಿಳಂಬಕ್ಕೆ ಅವಕಾಶ ನೀಡದಂತೆ ಜಾರಿಮಾಡಲು ಸಂಬಂಧಪಟ್ಟ ಎಲ್ಲಾ ಅಧಿಕಾರಿ / ಸಿಬ್ಬಂದಿಗಳು ಕ್ರಮ ಕೈಗೊಳ್ಳುವುದು.

ಸುತ್ತೋಲೆ ನಿರ್ದೇಶನಗಳನ್ನು ಅನುಷ್ಠಾನಗೊಳಿಸಿರುವುದಕ್ಕೆ ತಪ್ಪದೇ ಸ್ವೀಕೃತಿಯನ್ನು ನೀಡುವುದು.

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)

**ಪ್ರತಿಯನ್ನು :**

1) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
7) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಸರಕುಪಟ್ಟಿ (Invoice) ಮಾದರಿ

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು

### ಸಂಚಾರ (ವಾಣಿಜ್ಯ) ಇಲಾಖೆ

ಗೆ,

ಪರವಾನಗಿದಾರರ ಹೆಸರು ಮತ್ತು ಪೂರ್ಣ ವಿಳಾಸ:

---------------------

--------------------

-------------.

ಪರವಾನಗಿದಾರರ ಜಿ.ಎಸ್.ಟಿ. ನೊಂದಣಿ ಸಂಖ್ಯೆ:-----------.

1. ಸರಕುಪಟ್ಟಿ ಸಂಖ್ಯೆ(Invoice No.):--------------
2. ಸರಕುಪಟ್ಟಿ ದಿನಾಂಕ (Invoice Date):------------
3. ಜಿ.ಎಸ್.ಟಿ. ನೊಂದಣಿ ಸಂಖ್ಯೆ(ತಾತ್ಕಾಲಿಕ): 29 AAACV6497R2Z4
4. ಜಿ.ಎಸ್.ಟಿ. ವರ್ಗ: ಸ್ಥಿರ ಆಸ್ತಿ ಸೇವೆಗಳ ಬಾಡಿಗೆ.
5. ಪಾನ್ ಸಂಖ್ಯೆ: AAACV6497R
6. ಮಾಹೆ :---------
7. ಬಸ್ ನಿಲ್ದಾಣ:------------
8. ಮಳಿಗೆ ಸಂಖ್ಯೆ:-------------
9. ಪಾವತಿಸಬೇಕಾದದ ಪರವಾನಗಿ ಶುಲ್ಕ:---------
10. ಜಿ.ಎಸ್.ಟಿ. ಮೊತ್ತ (ಶೇ.18) ರೂ.----------
11. ಪಾವತಿಸಬೇಕಾದ ಒಟ್ಟು ಮೊತ್ತ ರೂ.--------

ಸಹಿ
(ಸಂಬಂಧಿಸಿದ ಅಧಿಕಾರಿಗಳು)